# ಗಣೇಶ ಚತುರ್ಥಿ ಪ್ರಯುಕ್ತ ಸಂಗೀತೋತ್ಸವ ಕಾರ್ಯಕ್ರಮ



ಶುಭೋದಯ ವಾರ್ತೆ: (ಆ.29) ಕೆ ಎಲ್ ಎಸ್ ವಿ ಡಿ ಐ ಟಿ ಹಳಿಯಾಳದಲ್ಲಿ ಗಣೇಶ ಚತುರ್ಥಿ ಪ್ರಯುಕ್ತವಾಗಿ ಸಂಗೀತ ಕಾರ್ಯಕ್ರಮವನ್ನು ಆಗಸ್ಟ್ 28 ರಂದು ಆಯೋಜಿಸಲಾಗಿತ್ತು. ವಿಘ್ನ ನಿವಾರಕ ಗಣಪತಿಯನ್ನು ಪೂಜಿಸುವುದರೊಂದಿಗೆ ಆರಂಭಗೊಂಡ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಬೋಧಕ ಬೋಧಕೇತರ ಸಿಬ್ಬಂದಿಗಳು ಭಕ್ತಿಗೀತೆಯನ್ನು ಸಾದರ ಪಡಿಸಿದರು. ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ವಿಘ್ನ ನಿವಾರಕನು ಎಲ್ಲಾ ಸದ್ಭಕ್ತರ ಅಂಧಕಾರ ತೊಲಗಿಸಿ ಸನ್ಮಂಗಳ ಉಂಟು ಮಾಡಲಿ ಎಂದು ಹಾರೈಸಿದರು. ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ಸುಧೀರ್ ಕುಲಕರ್ಣಿ ಗಣೇಶ ಚತುರ್ಥಿಯ ಆಚರಣೆಯ ವಿಶೇಷತೆಯನ್ನು ವಿವರಿಸಿದರು. ಗಣೇಶ ಚತುರ್ಥಿಯ ಪ್ರಯುಕ್ತವಾಗಿ ವಿದ್ಯಾರ್ಥಿಗಳಾದ ಶ್ರೀ ಹರಿ, ಅನುಶ್ರೀ ಜೋಶಿ, ಸಂಜನಾ, ಸುಪ್ರೀತ್, ವಸುಧಾ, ನಕ್ಷತ್ರ ಭಕ್ತಿ ಗೀತೆಯನ್ನು ಹಾಡಿದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಪ್ರೊ. ಅಲ್ಲಮ ಪ್ರಭು ಕೊಳಕಿ, ಡಾ. ಸ್ನೇಹಾ ಕುಲಕರ್ಣಿ , ಸುನಿಲ್ ಯರಗಟ್ಟಿ, ಪ್ರೊ. ಸುಧೀಂದ್ರ ಯೆಲಗೂರ, ಪ್ರೊ. ಅನಿತಾ ಹಂಚಿನಾಳ, ಪ್ರೊ. ಪವಿತ್ರ ಬಡಿಗೇರ್, ವಿನಾಯಕ ಪುರೋಹಿತ್ ಗಣಪತಿ ಸ್ತುತಿಯನ್ನು ಪ್ರಸ್ತುತಪಡಿಸಿದರು. ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮ ಸಂಯೋಜಿಸಿದ್ದರು. ಪ್ರೊ. ರೋಹಿಣಿ ಕಲ್ಲೂರ್ ನಿರೂಪಿಸಿದರು. ಮಹಾವಿದ್ಯಾಲಯದ ಸಾಂಸ್ಕೃತಿಕ ವಿಭಾಗದ ವತಿಯಿಂದ ಆಯೋಜಿಸಿದ್ದ ಈ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಬೋಧಕ ಬೋಧಕೇತರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಗಣೇಶ ಚತುರ್ಥಿ: ಸಂಗೀತೋತ್ಸವ ಕಾರ್ಯಕ್ರಮ

• **ಹಳಿಯಾಳ:** ಪಟ್ಟಣದ ಕೆಎಲ್‌ಎಸ್ ವಿಡಿಐಟಿಯಲ್ಲಿ ಗಣೇಶ ಚತುರ್ಥಿ ಪ್ರಯುಕ್ತವಾಗಿ ಸಂಗೀತ ಕಾರ್ಯಕ್ರಮವನ್ನು ಆ.28 ರಂದು ಆಯೋಜಿಸಲಾಗಿತ್ತು. ವಿಘ್ನ ನಿವಾರಕ ಗಣಪತಿಯನ್ನು ಪೂಜಿಸುವುದರೊಂದಿಗೆ ಆರಂಭಗೊಂಡ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಬೋಧಕ ಬೋಧಕೇತರ ಸಿಬ್ಬಂದಿಗಳು ಭಕ್ತಿಗೀತೆಯನ್ನು ಪ್ರಸ್ತುತ ಪಡಿಸಿದರು.

ಈ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಪ್ರಾಚಾರ್ಯ ಡಾ.ವಿ.ಎ ಕುಲಕರ್ಣಿ ವಿಘ್ನ ನಿವಾರಕನು ಎಲ್ಲಾ ಸದ್ಭಕ್ತರ ಅಂಧಕಾರ ತೊಲಗಿಸಿ ಸನ್ಮಂಗಳ ಉಂಟು ಮಾಡಲಿ ಎಂದು ಹಾರೈಸಿದರು. ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ಸುಧೀರ್ ಕುಲಕರ್ಣಿ ಗಣೇಶ ಚತುರ್ಥಿಯ ಆಚರಣೆಯ ವಿಶೇಷತೆಯನ್ನು ವಿವರಿಸಿದರು. ಗಣೇಶ ಚತುರ್ಥಿಯ ಪ್ರಯುಕ್ತವಾಗಿ ವಿದ್ಯಾರ್ಥಿಗಳಾದ ಶ್ರೀಹರಿ, ಅನುಶ್ರೀ ಜೋಶಿ, ಸಂಜನಾ, ಸುಪ್ರೀತ್, ವಸುಧಾ, ನಕ್ಷತ್ರ ಭಕ್ತಿ ಗೀತೆಯನ್ನು ಹಾಡಿದರು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಪ್ರೊ.ಅಲ್ಲಮ ಪ್ರಭು ಕೋಳಕಿ, ಡಾ. ಸ್ನೇಹಾ ಕುಲಕರ್ಣಿ, ಸುನಿಲ್ ಯರಗಟ್ಟಿ, ಪ್ರೊ. ಸುಧೀಂದ್ರ ಯಲಿಗಾರ, ಪ್ರೊ. ಅನಿತಾ ಹಂಚಿನಾಳ, ಪ್ರೊ. ಪವಿತ್ರ ಬಡಿಗೇರ್, ವಿನಾಯಕ ಪುರೋಹಿತ್ ಗಣಪತಿ ಸ್ತುತಿಯನ್ನು ಪ್ರಸ್ತುತಪಡಿಸಿದರು. ಡಾ. ಸ್ನೇಹಾ ಕುಲಕರ್ಣಿ ಕಾರ್ಯಕ್ರಮ ಸಂಯೋಜಿಸಿದ್ದರು. ಪ್ರೊ. ರೋಹಿಣಿ ಕಲ್ಲೂರ್ ನಿರೂಪಿಸಿದರು. ಮಹಾವಿದ್ಯಾಲಯದ ಸಾಂಸ್ಕೃತಿಕ ವಿಭಾಗದ ವತಿಯಿಂದ ಆಯೋಜಿಸಿದ್ದ ಈ ಸಂಗೀತೋತ್ಸವ ಕಾರ್ಯಕ್ರಮದಲ್ಲಿ ಬೋಧಕ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

